**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.202/2021

**PW**.7

**CW**.17

**ಸಾಕ್ಷಿಯ ಹೆಸರು -ಡಾ. ಕೆ ಎಸ್ ವಾಣಿ**

**ಗಂಡನ ಹೆಸರು -ಎಸ್ ಸಂಪತಕುಮಾರ**

**ವಯಸ್ಸು -58 ವರ್ಷಗಳು** ದಿನಾಂಕ **17-03-2025** ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ -ಹಿರಿಯ ತಜ್ಞ ವೈದ್ಯರು , ಸಾರ್ವಜನಿಕ ಆಸ್ಪತ್ರೆ ,ಹುಣಸೂರು**

**ವಾಸಸ್ಥಳ -ಹುಣಸೂರು**

**ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದಃ-**

ನಾನು ದಿಃ 20-08-2010 ರಿಂದ ಇಲ್ಲಿಯವರೆಗೆ ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಹಿರಿಯ ತಜ್ಞ ವೈದ್ಯಾರಾಗಿ ಸೇವೆ ಸಲ್ಲಿಸುತ್ತಿದ್ದೇನೆ.

ದಿಃ 18-04-2020 ರಂದು ಬೆಳಗ್ಗೆ 6.30 ಗಂಟೆ ಸುಮಾರಿಗೆ ನಾನು ಆಸ್ಪತ್ರೆ ಕರ್ತವ್ಯದಲ್ಲಿರುವಾಗ ಜಯುಣ್ಣ ಎಂಬ ಗಾಯಾಳು ಹಲ್ಲೆ ಹಿನ್ನೆಲೆಗೆ ಒಳಗಾಗಿ ಚಿಕಿತ್ಸೆಗೆ ಬಂದಿದ್ದು , ಆತನನ್ನು ಪರೀಕ್ಷೆ ಮಾಡಿ ನೋಡಲಾಗಿ, ಆತನಿಗೆ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.

1. ಹಣೆಯ ಮಧ್ಯಭಾಗದಿಂದ ತಲೆಯ ಹಿಂಭಾಗದವರೆಗೆ ಸುಮಾರು 8 x 1 ಸೆಂ ಮೀ ಅಳತೆಯ ಒಂದು ಕತ್ತರಿಸಿದ ಗಾಯ

2. ಎಡಭಾಗದ ಹೊಟ್ಟೆಯ ಕೆಳಭಾಗದಲ್ಲಿ ಸುಮಾರು 1 x ½ ಸೆಂ ಮೀ ಅಳತೆಯ ಒಂದು ಹರಿದ ಗಾಯ

ಸದರಿ ಗಾಯಾಳುವಿಗೆ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಅಲ್ಲಿ ಗಾಯಾಳುವಿನ ತಲೆಯ ಸಿಟಿ ಸ್ಕ್ಯಾನ್ ಮತ್ತು ಎಕ್ಸರೇ ಮಾಡಿ, ಪುನಃ ನಮ್ಮ ಆಸ್ಪತ್ರೆಗೆ ಕಳುಹಿಸಿದ್ದು, ನಮ್ಮ ಆಸ್ಪತ್ರೆಯಲ್ಲಿ ಒಟ್ಟು 7 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ಆ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ಈಗ ನೋಡುತ್ತಿದ್ದು , ಅದನ್ನು ನಿಪಿ–13 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–13(ಎ) ಎಂದು ಗುರುತಿಸಲಾಯಿತು. ನನ್ನ ಅಭಿಪ್ರಾಯದಲ್ಲಿ ಒಂದನೇ ಗಾಯವು ತೀವ್ರ ಸ್ವರೂಪದ ಗಾಯವಾಗಿದ್ದು , ಎರಡನೇ ಗಾಯವು ಸಾದಾ ಸ್ವರೂಪದ ಗಾಯವಾಗಿರುತ್ತದೆ.

ದಿಃ 25–08–2020 ರಂದು ಪೊಲೀಸರ ಕೋರಿಕೆಯ ಮೇರೆಗೆ ಒಂದು ಮಚ್ಚನ್ನು ಪರೀಕ್ಷೆ ಮಾಡಿ, ಮಚ್ಚಿನಿಂದ ಹೊಡೆದರೆ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಒಂದನೇ ಗಾಯವು ಆಗಬಹುದು ಎಂದು ಅಭಿಪ್ರಾಯ ವರದಿ ನೀಡಿದ್ದೇನೆ. ಸದರಿ ಮಚ್ಚನ್ನು ಈಗಾಗಲೇ ಮು.ಮಾ–1 ಎಂದು ಗುರುತಿಸಲಾಗಿದೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–14 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–14(ಎ) ಎಂದು ಗುರುತಿಸಲಾಯಿತು. ಮು.ಮಾ–1 ಮಚ್ಚನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಆರ್ ಎಸ್ ಎಂ ವಕೀಲರಿಂದಃ–**

ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಮದ್ಯಪಾನ ಮಾಡಿ ಹರಿತವಾದ ವಸ್ತುವಿನ ಮೇಲೆ ತಲೆ ಮುಂದಾಗಿ ಬಿದ್ದರೆ ನಿಪಿ–13 ರಲ್ಲಿ ನಮೂದು ಮಾಡಿರುವ 1 ಮತ್ತು 2 ನೇ ಗಾಯಗಳು ಆಗುಬಹುದು ಎಂದರೆ ಸರಿ. ನಾನು ಯಾವುದೇ ಗಾಯಾಳುವನ್ನು ಪರೀಕ್ಷೆ ಮಾಡಿ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ಮು.ಮಾ–1 ಅನ್ನು ನಾನು ಪ್ರತ್ಯೇಕ್ಷವಾಗಿ ಪರೀಕ್ಷೆ ಮಾಡಿಲ್ಲ ಎಂದರೆ

ಸರಿಯಲ್ಲ. ಪೊಲೀಸರ ಮಾತು ಕೇಳಿ ನಿಪಿ–13 ಮತ್ತು 14 ಗಳನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.